ಅ) ನಷ್ಟದ ವರ್ಷವಾರು ವಿವರವನ್ನು ನೀಡುವುದೆಂ ?

ಇ) ಇದನ್ನು ಸರಿಪಡಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯ ಸಚಿವರು).—

ಅ) ಪ್ರಾರಂಭವಾದ ದಿನದಿಂದ ೩೧-೩-೮೫ರ ವರೆಗಿನ ಸಂಚಿತ ನಷ್ಟ ೧೨.೩೩ ಕೋಟಿ ರೂಪಾಯಿಗಳು. ೧೯೮೫-೮೬ನೇ ವರ್ಷದಲ್ಲಿ ನಿಗಮವು (ಲೆಕ್ಕ ಪರಿಶೋಧನೆಗೆ ಒಳಪಡದೆ) ೪೩.೯೮ ಲಕ್ಷ ರೂಪಾಯಿಗಳ ಲಾಭ ಮಾಡಿರುತ್ತದೆ. ಸಂಸ್ಥೆಯಿಂದ ಬಂಡವಾಳ ಹೂಡಿದ್ದು, ಪ್ರವರ್ತಿತವಾಗಿರುವ ಕೆಲವು ಕಂಪನಿಗಳಿವೆ. ಅವುಗಳ ಲಾಭಾಂಶದ ಮೊತ್ತದ ಬಗ್ಗೆ ಖಚಿತವಾದ ವರದಿ ದೊರೆಯದೆ ಇರುವುದರಿಂದ, ದಿನಾಂಕ ೧-೪-೧೯೮೬ ರಿಂದ ೩೧-೧೨-೧೯೮೬ ರ ತನಕ ಈ ಸಂಸ್ಥೆಯಲ್ಲಿ ಸಂಚಯಗೊಂಡ ನಷ್ಟ ಅಥವಾ ಲಾಭಾಂಶದ ಬಗ್ಗೆ ಈಗಲೇ ಮಾಹಿತಿ ದೊರಕಿಸಲು ಆಗುತ್ತಿಲ್ಲ.

ಆ) ವರ್ಷಂಪ್ರತಿ ನಷ್ಟದ ವಿವರ ಈ ಕೆಳಗಿನಂತಿದೆ.

ವರ್ಷ	ಲಕ್ಷ ರೂಪಾಯಿಗಳು ಲಾಭ : ನಷ್ಟ		ವರ್ಷ	ಲಕ್ಷ ರೂಪಾಯಿಗಳು ಲಾಭ : ನಷ್ಟ	
೧೯೭೭-೭೮	+	೦.೭೪	೧೯೭೫-೭೬	—	೧೪೧
೧೯೭೮-೭೯	+	೫.೯೬	೧೯೭೬-೭೭	—	೧೩೯
೧೯೭೯-೮೦	+	೪.೩೭	೧೯೭೭-೭೮	—	೧೧೧
೧೯೮೦-೮೧	+	೪.೦೦	೧೯೭೮-೭೯	—	೧೧೮
೧೯೮೧-೮೨	+	೫.೦೦	೧೯೭೯-೮೦	—	೧೪೮
೧೯೮೨-೮೩	+	೨.೦೦	೧೯೮೦-೮೧	—	೪೬
೧೯೮೩-೮೪	+	೮.೦೦	೧೯೮೧-೮೨	—	೮೧
೧೯೮೪-೮೫	+	೯೮.೦೦	೧೯೮೨-೮೩	—	೭೩೯
			೧೯೮೩-೮೪	—	೧೯೧
			೧೯೮೪-೮೫	—	೧೧೯
			೧೯೮೫-೮೬	+	೪೩.೯೮
					(ಲಾಭ) (ಪ್ರಸ್ತುತ)

ಇ) ಸರ್ಕಾರವು ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಕಾರ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದೆ. ನಿಗಮವು ತನ್ನ ಕಾರ್ಯವನ್ನು ಈಗ ಉತ್ತಮ ರೀತಿಯಲ್ಲಿ ಮಾಡುತ್ತಿದೆ. ೧೯೮೫-೮೬ನೇ ಸಾಲಿನಲ್ಲಿ ಮಾಡಿದ ಸೀಮಾಂತ ಲಾಭವು ಮುಂಬರುವ ವರ್ಷಗಳಲ್ಲಿ ಹೆಚ್ಚಾಗುವ ಸಂಭವವಿದೆ. ರಾಷ್ಟ್ರೀಯ ಉತ್ಪಾದನಾ ಪರಿಷತ್ತು ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಈ ಉತ್ತಮ ಕಾರ್ಯ ಸಾಧನೆಗೆ ಮಾನ್ಯತೆ ನೀಡಲು ೧೯೮೫-೮೬ ನೇ ಸಾಲಿನ ರಾಷ್ಟ್ರೀಯ ಉತ್ಪಾದನಾ ಪ್ರಶಸ್ತಿಯನ್ನು ಕೊಡಲಾಗುವುದೆಂದು ಇತ್ತೀಚೆಗೆ ಪ್ರಕಟಿಸಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ

೫೯೨. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದ ೩೧-೧೨-೮೬ರವರೆಗೆ ರಾಜ್ಯ ಸರ್ಕಾರದಿಂದ ಖರ್ಚು ಮಾಡಿದ ಹಣವೆಷ್ಟು ?

ಅ) ಯು. ಜಿ. ಸಿ. ಯಿಂದ ಬಂದಿರುವ ಸಹಾಯಧನ ಎಷ್ಟು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ರೂ. ೧೦,೩೩,೪೩,೧೫೮.೦೦ (ಹತ್ತು ಕೋಟಿ ಮುವ್ವತ್ತಮೂರು ಲಕ್ಷ ನಲವತ್ತಮೂರು ಸಾವಿರದ ನೂರ ಐವತ್ತೆಂಟು ರೂಪಾಯಿಗಳು)

ಆ) ಇದುವರೆವಿಗೂ ಏನೂ ಇಲ್ಲ

ಇಂಗ್ಲೀಷ್ ಮಾಧ್ಯಮದ ಶಾಲೆಗಳ ಬಗ್ಗೆ

೬೦೭. ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆವಿಗೂ ಸರ್ಕಾರದವರು ಮಾನ್ಯತೆ ನೀಡಿರುವ ಇಂಗ್ಲೀಷ್ ಮಾಧ್ಯಮದ ಶಾಲೆಗಳೆಷ್ಟು? (ಅನುಕ್ರಮವಾಗಿ ನರ್ಸರಿ, ಪ್ರೈಮರಿ, ಹಾಗೂ ಪ್ರೌಢಶಾಲೆ)ಹಾಗೂ ಅಲ್ಲಿ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

ಆ) ರಾಜ್ಯದಲ್ಲಿ ಈಗಿರುವ ಸರ್ಕಾರಿ ಮತ್ತು ಖಾಸಗಿ ಕನ್ನಡ ಮಾಧ್ಯಮದ ಶಾಲೆಗಳೆಷ್ಟು ? (ಅನುಕ್ರಮವಾಗಿ ನರ್ಸರಿ, ಪ್ರೈಮರಿ ಹಾಗೂ ಪ್ರೌಢಶಾಲೆ) ಹಾಗೂ ಅಲ್ಲಿ ಓದುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ ಎಷ್ಟು ?

ಇ) ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಇನ್ನು ಮುಂದೆ ಮಾನ್ಯತೆ ನೀಡುವುದನ್ನು ನಿಲ್ಲಿಸಲು ಹಾಗೂ ಈ ಹಿಂದೆ ನೀಡಿರುವ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ)

	ವಿದ್ಯಾರ್ಥಿಗಳು	ವ್ಯಾಸಂಗ ಮಾಡುತ್ತಿರುವವರ ಸಂಖ್ಯೆ ವಿದ್ಯಾರ್ಥಿನಿಯರು
ಖಾಸಗಿ ನರ್ಸರಿ ಶಾಲೆಗಳು ೩೬	೧೪೯೦	೧೭೧೦
ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳು ೯೯೫	೧,೮೮,೩೮೭	೧,೫೦,೧೯೯
ಖಾಸಗಿ ಆಂಗ್ಲ ಮಾಧ್ಯಮ ಪ್ರೌಢಶಾಲೆಗಳು ೨೨೩	೪೨,೦೫೨	೨೨,೨೯೯

ನರ್ಸರಿ ಶಿಕ್ಷಣವು ಕಡ್ಡಾಯ ಶಿಕ್ಷಣ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಸರ್ಕಾರವು ನರ್ಸರಿ ಶಾಲೆಗಳಿಗೆ ಈಗ ಮಾನ್ಯತೆ ನೀಡುತ್ತಿಲ್ಲ.

ಆ) ಸರ್ಕಾರಿ ಕನ್ನಡ ನರ್ಸರಿ ಶಾಲೆ ಇಲ್ಲ		
ಖಾಸಗಿ ಕನ್ನಡ ನರ್ಸರಿ ಶಾಲೆ ೪೫೩	೩೨,೫೬೯	೨೬,೯೪೪
ಸರ್ಕಾರಿ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳು ೩೧೯೧	೨೭,೯೪,೬೯೭	೨೦,೪೭,೬೮೦
ಖಾಸಗಿ ಕನ್ನಡ ಮಾಧ್ಯಮ ಪ್ರಾ. ಶಾಲೆಗಳು ೧೬೦೭	೫೨,೮೭೮	೪೬,೬೯೮
ಸರ್ಕಾರಿ ಕನ್ನಡ ಮಾಧ್ಯಮ ಪ್ರೌಢಶಾಲೆಗಳು ೧೨೧೫	೧,೭೮,೧೭೯	೧,೪೫,೮೨೫
ಖಾಸಗಿ ಕನ್ನಡ ಮಾಧ್ಯಮ ಪ್ರೌಢಶಾಲೆಗಳು ೨೧೩೭	೨,೫೨,೫೨೫	೧,೭೨,೯೬೨

ಇ) ಸದ್ಯಕ್ಕೆ ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ